ಸರ್ವಜ್ಞ ಕೂಡಾ 'ಬರೆಯದೇ ಓದುವವನ ಕರೆತಂದು...' ಶಿಕ್ಷೆಯನ್ನೇ ಕೊಟ್ಟುಬಿಟ್ಟಿದ್ದಾನಲ್ಲ! ಹೀಗೆ 'ಅಳಿಸುವುದು' ಅಂದಿನಿಂದಲೂ ಕಲಿಕೆಯ ಅವಿಭಾಜ್ಯ ಅಂಗವೇ ಹೌದಲ್ಲವೇ!

ಇಂದಿಗೆ ಬರುವುದಾದರೆ, ಶಿಶುವಿಹಾರದಲ್ಲಿ ಶಿಕ್ಷಕರು ಪುಟ್ಟ ಮಕ್ಕಳ ಕೈ ಹಿಡಿದು ತಿದ್ದಿಸಲು ಬಳಸುವ ಕಪ್ಪು ಸ್ಲೇಟು-ಬಳಪದ ವಿಷಯದಲ್ಲೂ 'ಅಳಿಸುತ್ತಲೇ' ಕಲಿಸುವ ಪ್ರಕ್ರಿಯೆ ಮುಂದುವರೆದೇ ಇದೆ. ಈಗಿನವರು ಬಳಸುವ ಈ ಸ್ಲೇಟಿನ ಬಳಕೆಯ ಬಗ್ಗೆ ಹದಿನಾಲ್ಕನೇ ಶತಮಾನದಲ್ಲಿಯೇ ಕುರುಹುಗಳು ದೊರೆತಿದೆಯೆಂದರೆ ಈ 'ಅಳಿಸುವುದು' ಅದೆಷ್ಟು ಪ್ರಾಚೀನ ಸಂಸ್ಕೃತಿಯಾಗಿದ್ದೀತು? ಸ್ಲೇಟಿನ ನಂತರದ ಪೆನ್ಸಿಲ್ ಕೂಡಾ ಹಳೆಯದೇ. ಪೆನ್ಸಿಲ್ ಹುಟ್ಟಿದ್ದೆಲ್ಲಿ ಎಂದು ಕೆದಕುತ್ತಾ ಹೋದರೆ, 1795ರಲ್ಲಿ ನೆಪೋಲಿಯನ್ ಸೇನೆಯಲ್ಲಿ ಅಧಿಕಾರಿಯಾಗಿದ್ದ ನಿಕೋಲಾಸ್ ಜ್ಯಾಕ್ ಎನ್ನುವ ಅಸಾಮಿ ದೊರೆಯುತ್ತಾನೆ. ಆತ ಗ್ರ್ಯಾಫೈಟ್ ಪುಡಿಯ ಜೊತೆ ವಿಶೇಷ ಜೇಡಿಮಣ್ಣನ್ನು ಬೆರೆಸಿ ಪೆನ್ಸಿಲ್ ಕಡ್ಡಿಗಳನ್ನು ಮಾಡಿದ್ದನ್ನು ಇತಿಹಾಸ ದಾಖಲಿಸಿದೆ. ಪೆನ್ಸಿಲ್‌ನಲ್ಲಿ ಬರೆದದ್ದನ್ನೂ 'ಅಳಿಸ' ಬಹುದಾಗಿತ್ತಾದ್ದರಿಂದ ಕಲಿಯುವುದರಲ್ಲಿ, ಕಾಗದದ ಮರು ಬಳಕೆಯ ದೃಷ್ಟಿಯಿಂದ -ಅದೊಂದು ಪ್ರಮುಖ ಉಪಕರಣವಾಗಿ ಜನಜೀವನದಲ್ಲಿ ಇಂದಿಗೂ ಹಾಸುಹೊಕ್ಕಾಗಿದೆ.

ಹೀಗೆ, ಅಳಿಸುವುದರ ಬೆನ್ನು ಹತ್ತಿ ಹೋದಂತೆಲ್ಲ ವಿರಾಟ್ ದರ್ಶನವಾದಂತೆ, ಅದರ ನಾನಾ ಅಯಾಮಗಳು ಗೋಚರಿಸತೊಡಗಿದವು. ಪ್ರೀತಿ ಎಂಬುದು ಹೃದಯದಲ್ಲಿ ಬರೆದ ಶಿಲಾ ಬರಹ, ಹಾಗಾಗಿ ಅದನ್ನು 'ಅಳಿಸಲಾಗದು' ಎನ್ನುವಾಗಿನ ಉತ್ಕಟ ಭಾವುಕತೆ ಈ 'ಅಳಿಸುವಿಕೆ'ಯ ಸ್ವರೂಪವಾಗಿದೆಯಾದರೆ, ಇನ್ನೊಂದೆಡೆ ಅಡಿಗರ ಕವಿತೆಯಲ್ಲಿನ 'ಜಾತಕರ್ಮದಿ ನಿರತ ಈ ಪುರೋಹಿತ ಭಟ್ಟ ಅಪರ ಪ್ರಯೋಗದಲಿ ಪಾರಂಗತ' ಎನ್ನುವ ಸಾಲುಗಳಲ್ಲಿ ಹುಟ್ಟನ್ನು ಸಂಭ್ರಮಿಸುವ ಪಕ್ಕಪಕ್ಕದಲ್ಲೇ ಸಾವಿನ ನಂತರ ಆ 'ಹುಟ್ಟಿನ' ಗುರುತನ್ನೇ 'ಅಳಿಸಿಹಾಕುವ' ಸಂಕೇತವೂ, ವಚನ ಸಾಹಿತ್ಯದ ಜಂಗಮಕ್ಕೆ 'ಅಳಿವಿಲ್ಲ' ಎನ್ನುವಲ್ಲಿ ಅಪಾರ ವೈಚಾರಿಕತೆಯೂ ಇವೆ. ಇಂಗ್ಲಿಷ್ ಸಾಹಿತ್ಯಲೋಕದಲ್ಲಿ ವಿದ್ವಾಂಸನೆನಿಸಿಕೊಂಡ, 'ಕಾವ್ಯಕ್ಕಾಗಿ ಕಾವ್ಯ' ಎಂದು ಪ್ರತಿಪಾದಿಸಿದ ಎ.ಸಿ. ಬ್ರ್ಯಾಡ್ಲೀ, ಕಾವ್ಯದ ಸಂರಚನೆ, ಅದು ಕಟ್ಟಿಕೊಡುವ ಕಾವ್ಯಚಿತ್ರಗಳ ಬಗ್ಗೆ ಉಲ್ಲೇಖಿಸುತ್ತಾ -ಕವಿತೆಯಲ್ಲಿ ವಿಷಯಕ್ಕಿಂತ ರೂಪ-ನಿರೂಪಗಳೇ ಮುಖ್ಯ, ರೂಪದಿಂದ ಕವಿತೆಯ ವಿಷಯವನ್ನು 'ಅಳಿಸುವುದೇ' ಕಲೆಯ ರಹಸ್ಯ- ಎಂದು ಹೇಳುವಾಗ, ಈ 'ಅಳಿಸುವಿಕೆ' ಸೈದ್ಧಾಂತಿಕವಾಗಿಯೂ ಗೋಚರಿಸುತ್ತದೆ. ಜನಪ್ರಿಯ ಚಿತ್ರಗೀತೆಯ 'ದುಡಿಮೆಯೇ ಬಡತನ ಅಳಿಸಲು ಸಾಧನ' ಎನ್ನುವ ಈ ಸಾಲುಗಳಲ್ಲಿ 'ಅಳಿಸುವಿಕೆ'ಗೊಂದು ಗೇಯತೆಯ ಗರಿ! ವೇದದಲ್ಲಿ ಬರುವ ಕೆಲವು ಮಂತ್ರಗಳ ಪಠಣೆಯಿಂದ ಪಾಪ ಕರ್ಮಗಳು ಅಳಿಸಿಹೋಗುತ್ತವೆ ಎನ್ನುವ ನಂಬಿಕೆಯ ಬೆಳಕಲ್ಲಿ ಈ 'ಅಳಿಸುವಿಕೆ' ವೇದಾಂತವಾಗಿಯೂ ಕಾಣುತ್ತದೆ. ಈ ಮಂತ್ರಲೋಕದಿಂದ ತಂತ್ರಲೋಕಕ್ಕೆ ಜಿಗಿದರೆ, ದೇಶ ದೇಶಗಳ ಅತಿ ಸೂಕ್ಷ್ಮ ದತ್ತಾಂಶಗಳ ಭದ್ರ ಕೋಟೆಗೂ ಲಗ್ಗೆಯಿಟ್ಟು ಅವನ್ನೆಲ್ಲಾ "ಅಳಿಸಿ" ವಿರೂಪಗೊಳಿಸಿ ಜಗತ್ತಿನಲ್ಲಿ ಅಲ್ಲೋಲ-ಕಲ್ಲೋಲ ಸೃಷ್ಟಿಸುವ ವಿಧ್ವಂಸಕ ಕುಯುಕ್ತಿಯ ಕರಾಳತೆಯೂ ಇದೆ.

ಅಳಿಸುವುದನ್ನು ಹೀಗೆ ವಿಶ್ಲೇಸುತ್ತಿರುವಾಗಲೇ, ಅದರ ಫಲಶ್ರುತಿಗಳ ಬಗ್ಗೆ ಯೋಚಿಸಿದಾಗ ಹೇಗೆಲ್ಲಾ, ಏನೆಲ್ಲಾ ಅಳಿಸಿಹೋದವು, ಅಳಿಸಿದ ಮೇಲೂ ಏನಾದರೂ ಉಳಿದುಕೊಂಡವೇ ಎನ್ನುವುದರ ಬಗ್ಗೆ ಜಿಜ್ಞಾಸೆ ಉಂಟಾಗುವುದು ಸಹಜ. ಅಳಿಸಲು ಮನಸು ಮಾಡಿದ ನಂತರ ಹಾಗೆ ಅಳಿಸಲು ಬಳಸಿದ ಸಾಧನಗಳತ್ತ ದೃಷ್ಟಿ ಹಾಯಿಸುವಾಗ ಕಂಡುಬಂದದ್ದು ಇವು:

ಅಂಗೈಯಲ್ಲೊಮ್ಮೆ ಸವರಿದರೆ, ಮರಳಿನ ಮೇಲೆ ಬರೆದದ್ದೆಲ್ಲಾ ಅಳಿಸಿಹೋಗುತ್ತದೆ. ಮತ್ತೆ ಬರೆಸಿಕೊಳ್ಳಲು ಮರಳಿನ ಕಣಗಳು ಅಣಿಯಾದಂತೆ ಸ್ಲೇಟಿನ ವಿಷಯದಲ್ಲಿ ಹೇಳಲಾಗದು. ಸೀಮೆಸುಣ್ಣದ ಬಳಪದಲ್ಲಿ ಬರೆದದ್ದನ್ನು ಅಳಿಸಲು, ಅಮ್ಮನ ಹರಿದ ಸೀರೆಯ ಸೆರಗನ್ನೋ, ಅಪ್ಪನ ಪಂಚೆಯ ತುದಿಯನ್ನೋ ಒದ್ದೆ ಮಾಡಿ, ಏನಿಲ್ಲವೆಂದರೂ, ಯಾರಿಗೂ ಕಾಣದಂತೆ, ಸ್ಲೇಟಿಗೆ ಒಂದಿಷ್ಟು ಎಂಜಲು ಪೂಸಿ ಕೈಗಳಲ್ಲೇ ಒರೆಸಿದರೂ ಸ್ಲೇಟು ಶುದ್ಧ! ಮತ್ತೆ ಹೊಸದನ್ನು ಬರೆಯಲು ಸಿದ್ಧ! ಆಮೇಲಿನ ದಿನಗಳಲ್ಲಿ ಒಪ್ಪವಾಗಿ